ಮುಂಜಾವು
ವಾರಪತ್ರಿಕೆ.
ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

ಸಂಪುಟ ೧ ಸಂಚಿಕೆ ೫೦ ಕೊಪ್ಪ ೧೪-೮-೮೩ ಭಾನುವಾರ ಬೆಲೆ ೪೦ ಪೈಸೆ

ನಿವೃತ್ತ ಅಧ್ಯಾಪಕರಿಗೆ ಸನ್ಮಾನ

ಕೊಪ್ಪ: ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಕೊಪ್ಪ ಕೇಂದ್ರದ ಮಾಸಿಕ ಸಭೆ ಆ. ೫ ರಂದು ಕೆಳಪೇಟೆ ಹಿ। ಪ್ರಾ। ಶಾಲೆಯಲ್ಲಿ ಶಾಲಾ ತನಿಖಾಧಿಕಾರಿ ಎನ್.ಆರ್. ಶ್ರೀನಿವಾಸ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ, ಕಳೆದ ವರ್ಷ ನಿವೃತ್ತಿ ಹೊಂದಿದ ಶಿಕ್ಷಕರಾದ ಹೆಚ್. ಎಸ್. ನಾಗರಾಜ್ ಐಯ್ಯರ್, ಜಿ. ಕೆ. ಹಿರಿಯಣ್ಣಯ್ಯ, ಹಾಗೂ ಶ್ರೀಮತಿ ಬ್ಯಾಟ್ರಿಸ್ ಪಿಂಟೋ ಇವರುಗಳನ್ನು ಸನ್ಮಾನಿಸಲಾಯಿತು.

ಸಹಕಾರ ಸಂಘಗಳ ಅಧ್ಯಕ್ಷ, ಕಾರ್ಯದರ್ಶಿಗಳ ಸಭೆ

ಕೊಪ್ಪ: ಈ ತಾಲ್ಲೂಕಿನ ಸಹಕಾರ ಸಂಘಗಳ ಅಧ್ಯಕ್ಷರ ಮತ್ತು ಸದಸ್ಯರ ಸಭೆ ಆ. ೧೦ ರಂದು ಪಾಲ್ಕೈತೊಟ್ಟಿನ ಜಯರಾಮ ಜೋಯಿಸ್ ಅಧ್ಯಕ್ಷತೆಯಲ್ಲಿ ನಡೆಯಿತು.

ಹಳೇ ಸಾಲದ ಬಗ್ಗೆ ಅಮಲ್ ಜಾರಿಯಾಗಿರುವವರಿಗೆ ಹಳೇ ಸಾಲ ಕಟ್ಟಿದ್ದರೂ ಸ್ಟೇಟ್ ಬ್ಯಾಂಕಿನವರು ಸಾಲ ಮಂಜೂರು ಮಾಡದೆ ಇರುವುದನ್ನು ಖಂಡಿಸಲಾಯ್ತು. ಸದಸ್ಯರ ಶೇರು ಹಣದ ಪ್ರಮಾಣಕ್ಕನುಸಾರ ಮಾತ್ರ ಸಾಲ ಮಂಜೂರಾತಿ (ಜಮೀನಿನ ಮೇಲಲ್ಲ), ಹಾಗೂ ೮೩-೮೪ರ ಬಾಕಿ ಸಾಲಗಳಿಗೆ ದಾವೆ ಕ್ರಮ ಜರುಗಿಸದೆ ಹೊಸ ಸಾಲದ ರಿಕಾರ್ಡ್ ಇಳಿಸ ಕೂಡದು ಎಂಬ ಸುತ್ತೋಲೆಗಳನ್ನು ತೀವ್ರವಾಗಿ ಖಂಡಿಸಲಾಯಿತು.

ಶೇ. ೩೦ ರಷ್ಟು ಹೊಸ ಸಾಲಗಳನ್ನು ಮಂಜೂರು ಮಾಡಬೇಕೆಂಬ ನಿಯಮ ಕಡೆಗಣಿಸಿರುವುದನ್ನು ನಿಲ್ಲಿಸಲು ಕೋರಿದ ಸಭೆ, ಕಡ್ಡಾಯ ಜೀವವಿಮೆಯನ್ನು ಮಂಜೂರಾದ ಸಾಲಗಳಿಗೆಲ್ಲ ಕಡ್ಡಾಯಗೊಳಿಸುವುದನ್ನು ಕೈಬಿಡಲು ಒತ್ತಾಯಿಸಿತು.

ಒತ್ತಾಯಿಸಿ ಲಂಚ ಪಡೆದು ಪತ್ರಕರ್ತರ ಕ್ಷಮೆ ಕೇಳಿದ!

(ನಮ್ಮ ಪ್ರತಿನಿಧಿಯಿಂದ)

ಹರಿಹರಪುರ: ಬಂಡಿಗಡಿಯ ಅರ್ಚಕರೊಬ್ಬರಿಂದ ಸುಮಾರು ೪,೦೦೦ ರೂ. ತಸ್ತೀಕು ಹಣಕ್ಕೆ ೪೦೦ ರೂ. ಲಂಚ ಕೇಳಿ ಕೊಡದಿದ್ದಾಗ ಅವರ ಮನೆಗೇ ಹೋಗಿ ೧೫೦ ರೂ. ಗೆ ಚೆಕ್ ಪಡೆದ ಕೊಪ್ಪ ತಾ॥ ಕಚೇರಿ ಗುಮಾಸ್ತನೊಬ್ಬ, ಇದು ಹಿರಿಯ ಪತ್ರಕರ್ತರೊಬ್ಬರಿಗೆ ತಿಳಿದಾಗ ಚೆಕ್ ಹಿಂದಕ್ಕೆ ನೀಡಿ ಲಿಖಿತ ಕ್ಷಮಾಪಣೆ ಕೇಳಿದ ಪ್ರಸಂಗ ನಡೆದಿದೆ.

ಈ ಬಗ್ಗೆ ತನಿಖೆ ನಡೆಸಿದ ತಹಸೀಲ್ದಾರರು ಆತನಿಗೆ ತೀವ್ರವಾದ ಎಚ್ಚರಿಕೆ ನೀಡಿ ಪ್ರಕರಣ ಮುಕ್ತಾಯ ಗೊಳಿಸಿದರೆಂದು ಗೊತ್ತಾಗಿದೆ.

ತಾ॥ ರೈತ ಸಂಘದಿಂದ ಆಡಳಿತಸುಧಾರಣೆಸಮಿತಿಗಳು

ಕೊಪ್ಪ: ತಾಲ್ಲೂಕಿನ ಸರ್ಕಾರಿ ಆಡಳಿತದಲ್ಲಿ ಸುಧಾರಣೆ ಮಾಡಲು ರಾಜ್ಯ ರೈತಸಂಘದ ಕೊಪ್ಪ ತಾ॥ ಶಾಖೆ ಮೂರು ಸಮಿತಿಗಳನ್ನು ರಚಿಸಿದೆ.

ರೈತರ ಜಪ್ತಿಯನ್ನು ತಡೆಯಲು ಉದ್ದೇಶಿಸಿರುವ ಜಪ್ತಿ ವಿರೋಧಿ ದಳಕ್ಕೆ ಜಿ.ಪಿ. ಶ್ರೀನಾಥ್ ನಾಯಕರು; ಹೆಚ್. ಎಸ್. ಕಳಸಪ್ಪ, ಕೆ.ಆರ್. ದೇವೇಂದ್ರ ಸದಸ್ಯರು.

ಲಂಚ ವಿರೋಧಿ ದಳಕ್ಕೆ ಜಿ. ಡಿ. ಪರಮೇಶ್ವರ ಅಧ್ಯಕ್ಷರು; ವೈ. ಎಂ. ಸುರೇಂದ್ರ, ಕೆ. ಬಿ. ರಾಮಚಂದ್ರ ಸದಸ್ಯರು.

ಆಡಳಿತ ವೀಕ್ಷಣಾ ಸಮಿತಿ

ಹೆಚ್. ಸಿ. ಜಯಂತ್ ಅಧ್ಯಕ್ಷರಾಗಿರುವ ತಾ॥ ಆಡಳಿತ ವೀಕ್ಷಣಾ ಸಮಿತಿಯಲ್ಲಿ ಕೆಳಕಂಡ ಸದಸ್ಯರಿದ್ದಾರೆ.: ಎ. ರಾಮಚಂದ್ರರಾವ್, ಸಿ. ಸುರೇಶ್, ಎಂ. ಜಿ. ಶ್ರೀನಿವಾಸ್, ಖಾಂಡ್ಯ ಶ್ರೀನಿವಾಸ್, ಎ. ಪಿ. ವಿವೇಕಾನಂದ, ಕುಂಚೂರು ರವೀಂದ್ರ, ಶ್ರೀಪಾಲ ಮತ್ತು ಹೆಚ್. ಎಸ್. ನಂಜೇಶ್

ಜಿಲ್ಲಾ ರೈತಸಂಘದ ಅಧ್ಯಕ್ಷ ಮಳಿಗೆ ಚಂದ್ರಶೇಖರ್ ಅಧ್ಯಕ್ಷತೆಯಲ್ಲಿ ಜು. ೨೧ ರಂದು ನಡೆದ ತಾ॥ ಸಮಿತಿ ಸಭೆ ಈ ಸಮಿತಿ ಹಾಗೂ ದಳಗಳನ್ನು ರಚಿಸಿದ್ದಲ್ಲದೆ, ಜಿ. ಎಸ್. ಪ್ರಕಾಶ್ ಅವರನ್ನು ಸಂಘದ ಅಕೌಂಟೆಂಟ್ ಆಗಿ ನೇಮಿಸಿತು.

'ಮುಂಜಾವು'
ಚಂದಾದರ: ವಾರ್ಷಿಕ ಚಂದಾ ೨೦ರೂ.

ವಿದ್ಯುತ್ ಲೈನ್‌ಮನ್‌ನಿಂದ ತೊಂದರೆ ಬಗ್ಗೆ ಮಂತ್ರಿಗೆ ದೂರು

ಮೇಲ್ಪಾಲು: ಇಲ್ಲಿ ವಿದ್ಯುಚ್ಛಕ್ತಿ ಇಲಾಖೆಯ ಲೈನ್‌ಮನ್ ಆಗಿರುವ ಅಲಿ ಎಂಬಾತ ತನ್ನ ಕೆಲಸ ಸರಿಯಾಗಿ ನಿರ್ವಹಿಸದೆ, ಊರಿನಲ್ಲಿ ತಿಂಗಳಿಗೆ ೮-೧೦ ದಿನ ವಿದ್ಯುಚ್ಛಕ್ತಿ ಸರಬರಾಜು ಇಲ್ಲವಾಗುತ್ತಿದೆಯೆಂದು ಗ್ರಾಮಸ್ಥರು ವಿದ್ಯುಚ್ಛಕ್ತಿ ಇಲಾಖೆ ಮಂತ್ರಿಗಳಿಗೆ ದೂರಿದ್ದಾರೆ.

ಇಲ್ಲೇ ಇರಬೇಕಾದ ಈತ ದಿನವೂ ಬಾಳೆಹೊನ್ನೂರಿನಿಂದ ಒಂದೆರಡು ಗಂಟೆ ಕಾಲ ಬಂದು ಹೋಗುತ್ತ, ಊರಿಗೆ ವಿದ್ಯುತ್ ಅನುಕೂಲವಾಗಬೇಕಾದರೆ ದುಡ್ಡು ಕೊಡಲು ಹೇಳುತ್ತಾನೆಂದೂ, ಬೇರೆ ಲೈನ್‌ಮನ್‌ಗಳು ರಿಪೇರಿ ಮಾಡಿಟ್ಟರೆ ಮರುದಿನವೇ ಸರಬರಾಜು ನಿಲ್ಲಿಸುತ್ತಾನೆಂದೂ, ತಾನಲ್ಲದೆ ಬೇರೆ ಯಾರಾದರೂ ಕಂಬ ಹತ್ತಿದರೆ 'ಶಾಕ್' ಹೊಡೆಯುವ ವ್ಯವಸ್ಥೆ ಮಾಡುವುದಾಗಿ ಬೆದರಿಸುತ್ತಿದ್ದಾನೆಂದೂ ದೂರಿನಲ್ಲಿ ತಿಳಿಸಲಾಗಿದೆ.

ಈತನನ್ನು ಬದಲಾಯಿಸುವಂತೆ ಇಲಾಖಾ ವರಿಷ್ಠರಿಗೆ ಮಾಡಿರುವ ಮನವಿಗಳು ವಿಫಲವಾಗಿದ್ದು, ಈತನ ವರ್ಗಾವಣೆಯಾಗಿ ಬೇರೆ ಉತ್ತಮ ವ್ಯಕ್ತಿಯನ್ನು ಇಲ್ಲಿಗೆ ನೇಮಕ ಮಾಡುವವರೆಗೆ ಊರವರು ಸಾಮೂಹಿಕವಾಗಿ ವಿದ್ಯುತ್ ಶುಲ್ಕ ಕಟ್ಟದಿರಲು ತೀರ್ಮಾನಿಸಿರುವುದಾಗಿ ಗ್ರಾಮಸ್ಥರು ಮಂತ್ರಿಗಳಿಗೆ ಬರೆದಿದ್ದಾರೆ.

ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

೧೯೮೩-೮೪ ನೇ ಸಾಲಿನ ಮೆಟ್ರಿಕ್-ಪೂರ್ವ ವಿದ್ಯಾರ್ಥಿ ವೇತನಕ್ಕಾಗಿ ಹಿಂದುಳಿದ ಜಾತಿ ಹಾಗೂ ಹಿಂದುಳಿದ ಕೋಮಿನ ೫ ರಿಂದ ೧೦ನೇ ತರಗತಿಯವರೆಗಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಹಾಗೂ ಇಚ್ಛೆಯುಳ್ಳ ವಿದ್ಯಾರ್ಥಿಗಳು ನಿಗದಿತ ಅರ್ಜಿ ನಮೂನೆಗಳನ್ನು ಸಂಬಂಧಪಟ್ಟ ಶಾಲೆಗಳ ಮುಖ್ಯಸ್ಥರಿಂದ ಪಡೆದು ಪ್ರಮಾಣ ಪತ್ರಗಳೊಡನೆ ದಿ: ೩೦-೮-೮೩ ರೊಳಗೆ ಅರ್ಜಿಗಳನ್ನು ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಅಧಿಕಾರಿ, ಚಿಕ್ಕಮಗಳೂರು ಇವರಿಗೆ ಕಳುಹಿಸಲು ಕೋರಲಾಗಿದೆ.

'ಮುಂಜಾವು' ಜಾಹೀರಾತು ದರ
(ಕಾಲಂ ಸೆಂ. ಮೀ.ಗೆ)
ಮುಖಪುಟದಲ್ಲಿ: ೫ ರೂ.
ಇತರ ಪುಟಗಳಲ್ಲಿ: ೪ ರೂ

ಯಾರಿಗೆ ಬಂತು, ಎಲ್ಲಿಗೆ ಬಂತು— ನಲವತ್ತೇಳರ ಸ್ವಾತಂತ್ರ್ಯ?

ನಮ್ಮ ದೇಶದ ಸ್ವಾತಂತ್ರ್ಯ ದಿನವನ್ನು ಇದು ೩೬ನೇ ಸಲ ಆಚರಿಸುತ್ತಿದ್ದೇವೆ. ಬ್ರಿಟಿಷರು ಭಾರತ ಬಿಟ್ಟು ಹೋಗಿ ಇಲ್ಲಿಗೆ ೩೬ ವರ್ಷ ತುಂಬಿತು. ಅಂದಿನಿಂದ ನಮ್ಮ ದೇಶದಲ್ಲಿ ಪರಕೀಯರ ಆಳ್ವಿಕೆ ಹೋಗಿ ನಮ್ಮವರದೇ ಆಳ್ವಿಕೆ ನಡೆಯುತ್ತಿದೆ. ಆದ್ದರಿಂದ ನಮಗೆ ಸ್ವಾತಂತ್ರ್ಯ ಬಂದಿದೆ ಅನ್ನುತ್ತೇವೆ.

ಆದರೆ ಈ ಸ್ವಾತಂತ್ರ್ಯವನ್ನು ಸ್ವಲ್ಪ ವಿವರವಾಗಿ ಅರ್ಥ ಮಾಡಿ, ನಮಗೆ ನಿಜವಾಗಿ ಸ್ವಾತಂತ್ರ್ಯ ಇದೆಯೇ? ಎಂದು ಪರಿಶೀಲಿಸುವುದು ಅಗತ್ಯ.

ಸ್ವಾತಂತ್ರ್ಯದ ಅರ್ಥ

ಒಬ್ಬ ಮನುಷ್ಯ ಸ್ವತಂತ್ರ ಎನ್ನಬೇಕಾದರೆ ಆತ ಯಾರ ಹಂಗಿಲ್ಲದೆ ಬದುಕಲು ಸಾಧ್ಯವಿರಬೇಕು; ಯಾರ ಒತ್ತಡ, ಯಾವ ಭಯ–ಆಮಿಷಗಳೂ ಇಲ್ಲದೆ ವ್ಯವಹಾರ ನಡೆಸಲು ಸಾಧ್ಯವಿರಬೇಕು. ಬೇರೆಯವರಿಂದ ಸಹಾಯ, ಸಹಕಾರ ಪಡೆಯಬಹುದು, ಆದರೆ ಅದು ಆತನನ್ನು ಹಂಗಿಗೆ ದೂಡುವ ಪರಿಸ್ಥಿತಿಯಿರಬಾರದು. ಇದರ ಜೊತೆಗೆ ಜೀವನದ ಅನಿಶ್ಚಿತತೆಯಿಂದಲೂ ಮುಕ್ತವಾಗಿರಬೇಕು. ಅಂದರೆ ಒಂದು ಅಪಘಾತವೋ ಏನೋ ಆಗಿ ದುಡಿಯುವ ಶಕ್ತಿ ಹೋದರೆ ಮುಂದೆ ಹೇಗಪ್ಪಾ ಎಂಬಂತಿರಬಾರದು, ತಾನು ಸತ್ತರೆ ತನ್ನನ್ನು ಅವಲಂಬಿಸಿದವರ ಗತಿಯೇನು ಎಂಬ ಆತಂಕ ಇರಕೂಡದು. ಹಾಗೆಯೇ, ಪ್ರಕೃತಿಯ ವಿಕೋಪಗಳಾದ ನೆರೆ, ಬರಗಾಲ, ಭೂಕಂಪ ಇತ್ಯಾದಿಗಳನ್ನು ಪೂರ್ತಿಯಾಗಿ ತಪ್ಪಿಸಲು ಆಗದಿದ್ದರೂ, ಅವು ಆದಾಗ ಆತ ನಿರ್ಗತಿಕನಾಗಿ ಇನ್ನೊಬ್ಬರ ಕೃಪೆ ಮತ್ತು ಮರ್ಜಿಗೆ ಬೀಳುವಂತಿರಬಾರದು— ಆ ಮಟ್ಟಿಗೆ ಅವುಗಳಿಂದಲೂ ಅವನು ಸ್ವತಂತ್ರನಿರಬೇಕು.

ಇದು ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯ. ಇದರಲ್ಲಿ ಸ್ವೇಚ್ಛೆ—ಸ್ವಚ್ಛಂದ ಇಲ್ಲ, ಬೇಜವಾಬ್ದಾರಿ ಇಲ್ಲ, ಬೇರೆಯವರ ದಾರಿಗೆ ತೊಡಕಿಲ್ಲ, ದೇಶದ ಏಳ್ಗೆಗೆ ಧಕ್ಕೆಯಿಲ್ಲ, ವಾಸ್ತವವಾಗಿ ದೇಶದ ಪ್ರತಿಯೊಬ್ಬನ ಏಳ್ಗೆಯಾದರೆ ದೇಶ ಏಳ್ಗೆಯಾದಂತೆಯೇ ತಾನೆ?

ಇದು ಅತಿ ಆದರ್ಶದ್ದು ಎನ್ನಿಸಬಹುದಾದರೂ ಅಸಾಧ್ಯವಾದುದೇನೂ ಅಲ್ಲ.

ಒಂದು ದೇಶ ತನ್ನ ಪ್ರಜೆಗಳಿಗೆ ಈ ಮಟ್ಟದ ಸ್ವಾತಂತ್ರ್ಯ ದೊರಕಿಸಿಕೊಡಬಲ್ಲದಾದರೆ ಮಾತ್ರ ಆ ದೇಶದ ಸ್ವಾತಂತ್ರ್ಯಕ್ಕೆ ಒಂದು ಅರ್ಥವಿದೆ. ಇಲ್ಲವಾದರೆ ಅದು, ದೇಶದ ಸ್ವಾತಂತ್ರ್ಯದ ಹೆಸರಿನಲ್ಲಿ ಕೆಲವೇ ಜನ ಅನುಭವಿಸುವ ನಿರಂಕುಶವಾದ ಸ್ವಾತಂತ್ರ್ಯ ಮಾತ್ರ ಆಗುತ್ತದೆಯಷ್ಟೆ?

ನಮ್ಮ ದೇಶದೊಳಗೆ

ನಮ್ಮ ದೇಶದೊಳಗೆ ಜನ ಎಷ್ಟು ಸ್ವತಂತ್ರರಾಗಿದ್ದಾರೆ?

ದೇಶದ ಸುಮಾರು ಶೇ. ೪೮ ರಷ್ಟು ಜನ ಬಡತನದ ರೇಖೆಯ ಕೆಳಗಿದ್ದಾರೆ ಎಂದು ೩ ವರ್ಷದ ಹಿಂದೆ ಕೇಂದ್ರ ಸರ್ಕಾರ ಹೇಳಿತ್ತು. (ಅದಕ್ಕಿಂತ ಸ್ವಲ್ಪ ಮುಂಚೆ ಈ ಸಂಖ್ಯೆ ಶೇ. ೪೫ ರಷ್ಟಿತ್ತು. ಈಗ ಇನ್ನಷ್ಟು ಜಾಸ್ತಿಯಾಗಿರಲು ಸಾಕು.) ನಮ್ಮ ದೇಶದಲ್ಲಿ ಆಗ ಬಡತನದ ರೇಖೆ ಎಂದರೆ ತಿಂಗಳಿಗೆ ತಲಾ ಆದಾಯ ೯೮ ರೂ. ಆಗಿತ್ತು. ಅಂದರೆ ಒಂದು ತಿಂಗಳಲ್ಲಿ **ಖಾತ್ರಿಯಾದ** ಆದಾಯ ೯೮ ರೂ. ಗಿಂತ ಕಡಿಮೆಯಿರುವ ಜನ ದೇಶದ ಜನಸಂಖ್ಯೆಯ ಸುಮಾರು ಅರ್ಧದಷ್ಟಿದ್ದಾರೆ! ಇದರಲ್ಲಿ, ಚೂರು ಪಾರು ಜಮೀನಿದ್ದೂ ಕಡು ಬಡತನದಲ್ಲಿರುವವರು, ಕಡಿಮೆ ಸಂಬಳದ ಕಾರ್ಮಿಕರು, ಇತರೆ ಕಡಿಮೆ ಆದಾಯದ ಜನ ವರ್ಗಗಳು ಎಲ್ಲ ಸೇರಿಲ್ಲ.

ಸ್ವಂತ ನೆಲೆ, ಹೊಟ್ಟೆ ತುಂಬುವಷ್ಟು ಖಾತರಿ ಆದಾಯಗಳಿಲ್ಲದ ಈ ಅರ್ಧ ಜನ ಜೀವನದ ಇತರ ಅಗತ್ಯಗಳನ್ನು ಪೂರೈಸಿಕೊಳ್ಳುವುದಿರಲಿ, ದಿನಕ್ಕೊಮ್ಮೆಯಾದರೂ ಉಣ್ಣಬೇಕಾದರೂ ಸಹ ಯಾರ್ಯಾರಿಗೋ ಕೈ ಮುಗಿಯಬೇಕು, ಕಾಲು ಕಟ್ಟಬೇಕು, ಅಂಗಲಾಚಬೇಕು. ಇಂಥವರಿಗೆ 'ಸ್ವಾತಂತ್ರ್ಯ' ಇದೆ ಎಂದರೆ ಏನು ಅರ್ಥ?

ಕೂಲಿಗಾರರು, ಸಣ್ಣಪುಟ್ಟ ನೌಕರರು ಜಾಸ್ತಿ ಕೂಲಿ–ಸಂಬಳ ಕೇಳುವ ಹಾಗಿಲ್ಲ. ಒಟ್ಟಾಗಿ ಕೇಳಲು ಸಂಘ ಕಟ್ಟಿದರೆ ಸುಳ್ಳು ಪೋಲೀಸ್ ಕೇಸು ಹಾಕಿ ಹಿಂಸೆ; ಕಷ್ಟಪಟ್ಟು ಎಲ್ಲ ಸಹಿಸಿ ಸಂಘ ಕಟ್ಟಿಕೊಳ್ಳುವ ಹೊತ್ತಿಗೆ ಎಲ್ಲವನ್ನೂ ಒಂದೇ ಸಲ ಅಳಿಸಿ ಹಾಕುವಂಥ ರಾಷ್ಟ್ರೀಯ ಭದ್ರತಾ ಕಾಯ್ದೆಗಳು, 'ತುರ್ತು ಪರಿಸ್ಥಿತಿ'ಗಳು – ಇತ್ಯಾದಿ ಎರಗುತ್ತವೆ. ಇವರಿಗೆಲ್ಲ ಸ್ವಾತಂತ್ರ್ಯ ಇದೆಯೆನ್ನಬಹುದೆ?

ರೈತರು ತಾವು ತರುವ ಪದಾರ್ಥಗಳ ಬೆಲೆ ಹತೋಟಿ ಕೇಳುವಂತಿಲ್ಲ, ತಾವು ಮಾರುವ ವಸ್ತುವಿಗೆ ಬೆಲೆ ನಿಗದಿ ಮಾಡುವ ಹಾಗಿಲ್ಲ, ಒಂದು ಸೌಲಭ್ಯವೂ ಸೆಟ್ಟಗಿಲ್ಲ. ಯಾರ್ಯಾರೋ ತಿಂದು ಕೊಬ್ಬಲು ಪ್ರಕೃತಿಯನ್ನು ಘಾಸಿಗೊಳಿಸುತ್ತಿರುವುದಕ್ಕೆ ಅದು ತೋರಿಯುವ ಪ್ರತೀಕಾರ ಸ್ಕೆಲ್ಲಿಕೂಡು ರೈತರು. ಸರ್ಕಾರದ ಉಪದ್ರವ ಇಲಾಖೆ, ಹೊಣೆಗೇಡಿ ಇಲಾಖೆ, ತಿಳಿಗೇಡಿ ಇಲಾಖೆ, ಜೋಬದ್ರ ಇಲಾಖೆ, ನಿದ್ರೆ ಇಲಾಖೆ, ನುಂಗಪ್ಪ ಇಲಾಖೆ–ಮುಂತಾದ ಹಲವು–ಹನ್ನೊಂದು ಇಲಾಖೆಗಳ ಬಂದಣಿಕೆ ಅಧಿಕಾರಿಗಳಿಗೆಲ್ಲ ಗ್ರಾಸ ಕೊಡುತ್ತ ತಗ್ಗಿ ಬಗ್ಗಿ ನಡೆಯಬೇಕು. ಇಲ್ಲದಿದ್ದರೆ, ನೂರಾರು ವರ್ಷಗಳಿಂದ ಮಾಡಿ ಹಾಕಿದ ಕಾನೂನುಗಳಿವೆ, ಕಾನೂನು ಜಾರಿಮಾಡಲು ಪೋಲೀಸು, ಕೋರ್ಟು, ಸರ್ಕಾರ ಎಲ್ಲ ಇವೆ. ಆದರೂ ರೈತರು ಸ್ವತಂತ್ರರೆ?

ದೇಶದಲ್ಲಿ ಅಕ್ಷರತೆ ಶೇ. ೩೬. (ಓದು–ಬರಹ ಅಲ್ಪ ಸ್ವಲ್ಪ ಬಂದು, ಸ್ವತಂತ್ರ ವ್ಯವಹಾರಕ್ಕೆ ಬೇಕಾದಷ್ಟು ಗೊತ್ತಿಲ್ಲದವರೂ ಸಾಕ್ಷರರ ಲೆಕ್ಕಕ್ಕೇ ಬರುತ್ತಾರೆ.) ನಿರುದ್ಯೋಗಿಗಳ ಸಂಖ್ಯೆ— ರಿಜಿಸ್ಟರ್ ಮಾಡಿಸಿಕೊಂಡವರು—ಒಂದೂ ಮುಕ್ಕಾಲು ಕೋಟಿ. (ರಿಜಿಸ್ಟರ್ ಮಾಡಿಸಿಕೊಳ್ಳದವರು, ಅರೆ–ಬರೆ ಉದ್ಯೋಗಿಗಳು, ಖಾತ್ರಿ ಆದಾಯ ಇಲ್ಲದ ಕಸುಬಿನವರು, ಹಳ್ಳಿಯ ನಿರುದ್ಯೋಗಿಗಳು —ಮುಂತಾದವರು ಇದರ ಎಷ್ಟೋ ಪಟ್ಟು.) ಈ ಮಂದಿಗೆಲ್ಲ ಯಾವ ಸ್ವಾತಂತ್ರ್ಯ?

ದೇಶವನ್ನಾಳುವುದು ಒಂದು ಪಕ್ಷವಲ್ಲ. ಯಾವ ಪಕ್ಷ ಅಧಿಕಾರಕ್ಕೆ ಬಂದರೂ ತನ್ನ ಹಿತಕ್ಕೆ ಅನುಕೂಲವಾದ ನೀತಿಯಿಂದ ಬದಿಗೆ ಸರಿಯದಂತೆ ಆಡಳಿತದ ಮೇಲೆ ಹತೋಟಿ ಹೊಂದಿರುವ ಒಂದು ವರ್ಗ ದೇಶವನ್ನು ನಿಜವಾದ ಅರ್ಥದಲ್ಲಿ ಆಳುತ್ತಿದೆ–ತನಗೆ ಬೇಕಾದ ಪಕ್ಷಗಳ ಮೂಲಕ ಹಾಗೂ ತಾನು ನಿರೂಪಿಸಿ ಹಬ್ಬಿಸಿರುವ ಸಿದ್ಧಾಂತ, ಆಲೋಚನಾ ಕ್ರಮಗಳ ಮೂಲಕ. ಈ ವರ್ಗದ ಏಕಮೇವ ಸ್ವಾರ್ಥದ ನೀತಿಯಿಂದಾಗಿ ಹಳ್ಳಿಗಳು ಘೋರ ನರಕಗಳಾಗಿ, ಪಟ್ಟಣಗಳು ದಿಕ್ಕು ದೆಸೆಯಿಲ್ಲದೆ ಬೆಳೆಯುತ್ತಿವೆ. ಈ ನಗರಗಳ ಜನರಿಗೆ ಕುಡಿಯುವ ನೀರು, ದೀಪ, ನೈರ್ಮಲ್ಯಗಳ ವ್ಯವಸ್ಥೆ ಆಗುತ್ತಿಲ್ಲ. ಅವರೆಲ್ಲ ಬಾಡಿಗೆ ಮನೆಯವರ, ಲಾಭಕೋರ ದಲ್ಲಾಳಿ–ವ್ಯಾಪಾರಿಗಳ, ಭ್ರಷ್ಟ ಅಧಿಕಾರಿಗಳ–ಇನ್ನೂ ಯಾರ್ಯಾರದೋ ಅಂಕೆಯಲ್ಲಿ ಜೀವಿಸುತ್ತಾರೆ. ಅಲ್ಲಲ್ಲಿನ ಗೂಂಡಾ ಗುಂಪುಗಳು ಅವರನ್ನು ಸದಾ ಭೀತಿಯ ನೆರಳಲ್ಲಿ ಇಟ್ಟಿರುವುದು ಸಾಮಾನ್ಯವಾಗುತ್ತಿದೆ.

ಯಾರ್ಯಾರಿಗೆ ಸ್ವಾತಂತ್ರ್ಯ ಇದೆ?

ಇಷ್ಟೆಲ್ಲ ಆಲೋಚಿಸುತ್ತ ಬರುವಾಗ ಎದುರಾಗುವ ಈ ಪ್ರಶ್ನೆಗೆ ನಮಗೆ ಹೊಳೆಯುವ ಉತ್ತರವೆಂದರೆ: ಮೊಟ್ಟಮೊದಲನೆಯದಾಗಿ ಹಿಂದೆ ಹೇಳಿದಂಥ ಆಳುವ ವರ್ಗದ ಜನ ಸಂಪೂರ್ಣ ಸ್ವಾತಂತ್ರ್ಯ ಅನುಭವಿಸುತ್ತಾರೆ. ದೇಶದ ಉಳಿದೆಲ್ಲ ಅಂಗಗಳು—ರಾಜಕಾರಣಿಗಳು, ಅಧಿಕಾರಿಗಳು, ಪೋಲೀಸು, ಕಾನೂನುಗಳು, ಪರೋಕ್ಷವಾಗಿ ನ್ಯಾಯಾಂಗ ಕೂಡ, ಎಲ್ಲ–ಇವರ ಆಡಿಯಾಳುಗಳು. ಇವರ ನಿರಂಕುಶ ಸ್ವಾತಂತ್ರ್ಯಕ್ಕೆ ಯಾರೂ ಅಡ್ಡ ಬರುವವರಿಲ್ಲ. (ಉದಾಹರಣೆಗೆ, ಕಾಡಿಗೆ ಬೆಂಕಿ ಕೊಟ್ಟು ತಮ್ಮ ಕಾಫಿ ತೋಟ 'ರಕ್ಷಿಸಿ' ಕೊಂಡದ್ದು ಒಬ್ಬ ಶಾಸಕನಿಗೇ ತಿಳಿದರೂ ಅವರ ವಿರುದ್ಧ ಹೋಗಲಾರ; ತಮ್ಮ ಸಂಸ್ಥೆಯ ಉದ್ಯೋಗಿಗಳಿಗೂ, ಸಾರ್ವಜನಿಕರಿಗೂ ಚಳ್ಳೆಹಣ್ಣು ತಿನ್ನಿಸಿ,

(ಮುಂದಿನ ಪುಟಕ್ಕೆ)

ಯೋಚಿಸುವ ಮಾತು

ನಾವು ಇನ್ನೊಬ್ಬನ್ನ ಗ್ರೇಟ್ ಅಂತ ಒಪ್ಪಲ್ಲ; ಯಾಕೆಂದ್ರೆ ನಾವು ಚಿಕ್ಕೋರಾಗ್ತೀವಿಂತ. ನಮ್ಮ ಧರ್ಮ ದೊಡ್ಡದು ಅನ್ನೋ ಎಷ್ಟು ಮಂದಿ ನಮ್ಮ ಧರ್ಮ ಅರಿತಿದ್ದಾರೆ? 'ನಿನ್ನ ಧರ್ಮ ಪ್ರೀತಿಸು' ಅನ್ನೋದು ಇಂದು 'ಅನ್ಯ ಧರ್ಮ ವಿರೋಧಿಸು' ಅನ್ನೋ ಆಚರಣೆ ಹಂತಕ್ಕೆ ಇಳಿದಿದೆ. ಮನುಷ್ಯರು ಪ್ರಾಣಿಗಳಿಗಿಂತ ಮೇಲ್ದರ್ಜೆಯವರೆಂದುಕೊಳ್ಳುವ–ನಾವು–ಕೊನೇಪಕ್ಷ ಪ್ರಾಣಿ ಹಂತಕ್ಕಾದ್ರೂ ಏರೋ ಯತ್ನ ಮಾಡಿದ್ರೆ ನಮ್ಮ ಮಕ್ಕಳ ಕಾಲಕ್ಕಾದ್ರೂ 'ಪ್ರೀತಿ', 'ಪ್ರೇಮ', 'ನಂಬಿಕೆ', 'ಅರ್ಹತೆ'ಗಳು ಜೀವನದಲ್ಲಿ ಮೂಡಿಬರಬಹುದು.

—ಲರ್ಯೆ ಡಾ|| ಗಂಗಾಧರ ಶೇಖ,
(ಮೂಡಿಗೆರೆಲಯನ್ಸ್ ಸಮಾರಂಭದ)

ಆಗಸ್ಟ್ ಹದಿನೈದರ ನೆನಪು.....

ಬೆಳಗಿನ ಗುಂಡು ಗುಡುಗಿನ ಸುಪ್ರಭಾತಕ್ಕೆ
ತಣ್ಣಗೆ ಎಚ್ಚರಾದಾಗ, ಪತ್ರಿಕೆಯ ತುಂಬೆಲ್ಲ
ಸಾವು ನೋವಿನಸುದ್ದಿ, ಇನ್ನೊಂದು ಬದಿಯಲ್ಲಿ
ನಮ್ಮ ನಾಯಕರ ಹಲ್ಕಿರಿತದ ಪೋಜು.

ಒಲೆಮುಂದೆ ಕುಂತ ಅವ್ವನ ಮುಂದೆ
ಖಾಲಿ ಮಡಿಕೆ, ಹಿಟ್ಟು ಬತ್ತಿದ ಬುತ್ತಿ
ತಣ್ಣಗೆ ನಡುಗುವ ನನ್ನವ್ವನ ಕಣ್ಣಲ್ಲಿ ಅರ್ಥವಾಗದ ನೀರು.

ಮಾರವ್ವನ ಹಿಡಿದು ಹಾಡಹಗಲೆ ಸಂಭೋಗಿಸಿದ
ಸಿದ್ದಣ್ಣನಿಗೆ ಅಧಿಕಾರ ಪಟ್ಟದ ಸುದ್ದಿ.
ಒಪ್ಪತ್ತಿನ ಊಟಕೂ ಗತಿಯಿಲ್ಲದವ ಕಿವಿ ತುಂಬೆಲ್ಲ
ಇಪ್ಪತ್ತಂಶ ತುಂಬುತ್ತಿರುವ ಡೆಲ್ಲಿ ದರ್ಬಾರಿನ ಕೂಗು
ಅಲ್ಲಲ್ಲಿ ಬೆಂಕಿ ಹಚ್ಚಿದ, ಅವ ಇವನ ಕೊಂದ,
ಕಳ್ಳ ಮಂತ್ರ ಹೇಳಿ ಜಗದ್ಗುರು ಪಟ್ಟ ಏರಿದ,
ಸಿಡಿದೆದ್ದು ಎದ್ದವರ ಎದೆಗೆ ಪೋಲೀಸರ ಗುಂಡು
ಹಾರಿ ತನಿಖೆ ನಾಟಕ ನಡೆದ

ತರತರದ ತಾಜಾ ಸುದ್ದಿಗಳ ನಡುವೆ—
ಹೊತ್ತದ ಒಲೆಯ ಮುಂದೆ ಹಸಿವಿನ
ಬಂದಿಯಾಗಿ ಕಣ್ಣೀರು ಹಾಕುತ್ತ ಕುಂತ
ನನ್ನವ್ವನ ಕಂಡಾಗ ಮತ್ತೆ,
ಆಗಸ್ಟ್ ಹದಿನೈದರ ನೆನಪು....

—**ಕಂ. ಕ. ಕೃಷ್ಣಮೂರ್ತಿ,** ಕಂಚೀತೋಟ.

ಯಾರಿಗೆ ಬಂತು, ಎಲ್ಲಿಗೆ ಬಂತು— ನಲವತ್ತೇಳರ ಸ್ವಾತಂತ್ರ್ಯ?

(೨ನೇ ಪುಟದಿಂದ)

ಕಾನೂನಿನ ಒಳಮಾರ್ಗಗಳ ಮೂಲಕ ಅಥವಾ ಕಾನೂನನ್ನೇ ಮುರಿದು ದುಡ್ಡಿನ ಅಧಿಕಾರಿಗಳ ಮೂಲಕ ತಮಗೆ ಬೇಕಾದ ರೀತಿ ನಡಕೊಳ್ಳುವವರ ಬಗ್ಗೆಯೂ ಶಾಸಕ ಅಥವಾ ಮಂತ್ರಿಯಾದರೂ ಅಸಹಾಯಕ; ಅವರ ದಾನ ಬದ್ಧಿಯನ್ನು ಹಾಡಿ ಹೊಗಳುವುದು ಮಾತ್ರ ಅವನ ಕೆಲಸ; ಇತ್ಯಾದಿ.) ದೇಶಾದ್ಯಂತ ಬೆರಳೆಣಿಕೆಯಷ್ಟಿರುವ ಈ ವರ್ಗದ ಜನ ಕಾಲಕಾಲಕ್ಕೆ ಹಬ್ಬಿಸುವ ಸಿದ್ಧಾಂತ ದೇಶವನ್ನು ಅವರ ಹಿತಾಸಕ್ತಿಗೆ ತಕ್ಕಂತೆ ನಡೆಸುತ್ತದೆ.

ಎರಡನೆಯದಾಗಿ ಈ ವರ್ಗದ ಸೇವೆ ಮಾಡುವ ರಾಜಕಾರಣಿಗಳು, ಅಧಿಕಾರಿಗಳು ಹಾಗೂ **ಮಠಗಳೂ ಸಹ** ಸ್ವಾತಂತ್ರ ಅನುಭವಿಸುತ್ತಾರೆ. ಅವರು ತಮ್ಮ 'ಯಜಮಾನರನ್ನು' ಮೀರದಿದ್ದರಾಯಿತು ಅಷ್ಟೆ.

ಇದಲ್ಲದೆ ಇನ್ನು ತಕ್ಕಮಟ್ಟಿಗೆ ಸ್ವಾತಂತ್ರ್ಯ ಅನುಭವಿಸುವವರೆಂದರೆ, ಆಳವಾಗಿ ಭ್ರಷ್ಟರಾಗಿದ್ದುಕೊಂಡು, ಮೇಲಧಿಕಾರಿಗಳ ಮರ್ಜಿಗೆ ತಕ್ಕಂತೆ ಆತ್ಮ ಗೌರವ ಬಿಟ್ಟು, ಯಾವ ಬೂಟನ್ನಾದರೂ ನೆಕ್ಕಬಲ್ಲ ನೌಕರ ವರ್ಗ (ಇದನ್ನು ಮಾಡಲಾರದ ನೌಕರರಿಗೆ ಸ್ವಾತಂತ್ರ್ಯ ಮೊಟಕು), ಕಳ್ಳ–ಕಾಕರು, ಕಾಳಸಂತೆ–ಕಪ್ಪು ಹಣ–ಕಲಬೆರಕೆಯ ಜನ, ಹಾಗೂ ಇನ್ನಿತರ ಶುದ್ಧಾಂಗ ಮೋಸಗಾರರು.

ಹೌದೆ?

ಇದಿಷ್ಟು ದೇಶದೊಳಗಿನ 'ಸ್ವಾತಂತ್ರ್ಯ'ದ ಕತೆಯಾಯಿತು. ದೇಶದ ಹೊರಗೆ?

ಅಂತರಾಷ್ಟ್ರೀಯ ವಲಯದಲ್ಲಿ ಭಾರತ

ಮೂರನೇ ವಿಶ್ವದ ದೇಶಗಳಲ್ಲಿ, ಅಂದರೆ ಅಭಿವೃದ್ಧಿ ಮತ್ತು ಹಣಕಾಸು ಪರಿಸ್ಥಿತಿಯಲ್ಲಿ ಹಿಂದುಳಿದಿರುವ ಏಷ್ಯಾ, ಆಫ್ರಿಕಾ ಮತ್ತು ದಕ್ಷಿಣ ಅಮೆರಿಕಗಳ ಬಡ ದೇಶಗಳ ಗುಂಪಿನಲ್ಲಿ ಇಂದು ಭಾರತ ಬಹಳ ಹೆಗ್ಗಳಿಕೆಯ ಸ್ಥಾನದಲ್ಲಿದೆ. ಅಲಿಪ್ತ ಚಳುವಳಿ, ವಿಶ್ವಸಂಸ್ಥೆಯ ಅಭಿವೃದ್ಧಿಪರ ದೇಶಗಳ ವಿವಿಧ ಒಕ್ಕೂಟಗಳು ಮುಂತಾದ ವೇದಿಕೆಗಳಲ್ಲಿ ಭಾರತಕ್ಕೆ ಹಿರಿಯ ಸ್ಥಾನವಿದೆ. **ಹಲವು** ಅಂತರ ರಾಷ್ಟ್ರೀಯ ವಿಷಯಗಳಲ್ಲಿ **ಈ ದೇಶಗಳು** ಭಾರತದ ನಾಯಕತ್ವವನ್ನು ಎದುರು ನೋಡುತ್ತವೆ.

ಮುಂದುವರಿದ ದೇಶಗಳೂ ಸಹ ತಮ್ಮ ಆಲೋಚನೆ – ಯೋಜನೆಗಳಲ್ಲಿ ಭಾರತಕ್ಕೊಂದು ವಿಶಿಷ್ಟ ಸ್ಥಾನ ಕೊಡುತ್ತಿವೆ. ಅದಕ್ಕೆ ಬೇಕಾದಷ್ಟು ಸಾಲ–ನೆರವು ಕೊಡುತ್ತವೆ; ಅಂತರ ರಾಷ್ಟ್ರೀಯ ನಿಧಿಗಳಲ್ಲಿ ಭಾರತದ ಸಾಲದ ಅರ್ಜಿಗೆ ಬೆಂಬಲ ಕೊಡುತ್ತವೆ; ಭಾರತದಲ್ಲಿ ಕೈಗಾರಿಕೆ ಸ್ಥಾಪಿಸಲು ಮುಂದೆ ಬರುತ್ತವೆ; ಬೇರೆ ದೇಶಗಳೆದುರು ಭಾರತವನ್ನು ಹಾಡಿ ಹೊಗಳುತ್ತವೆ.

ಭಾರತವೂ ಸಹ ತನ್ನ ಜುಟ್ಟಿಗೆ ಇನಷ್ಟು–ಮತ್ತಷ್ಟು ಮಲ್ಲಿಗೆ ಹೂಗಳನ್ನು ಸೇರಿಸಿಕೊಳ್ಳುತ್ತಿದೆ. ಬಾಹ್ಯಾಂತರಿಕ್ಷದ ಸಾಧನೆಗಳಂತೆ, ಪರಮಾಣು ವಿಜ್ಞಾನದ ಪ್ರಗತಿಯಂತೆ, ಬಣ್ಣದ ಟೆಲಿವಿಷನ್ ಅಂತೆ, ಏಷ್ಯನ್ ಕ್ರೀಡಾ ಕೂಟವಂತೆ, ಅಲಿಪ್ತ ಶೃಂಗ ಸಮ್ಮೇಳನವಂತೆ.... ಇನ್ನು ವಿಶ್ವಕಪ್ ಕ್ರಿಕೆಟ್, ಒಲಿಂಪಿಕ್ಸ್‌ಗಳನ್ನು ನಡೆಸಲೂ ಸನ್ನಾಹ ನಡೆಸುತ್ತಿದೆ. ಈ ಎಲ್ಲಾ ಸಾಧನೆಗಳನ್ನು ಸಾಲ–ಸೋಲವಿಲ್ಲದೆ, ತಮ್ಮ ಸ್ವಂತ ಶಕ್ತಿಯಿಂದಲೇ ಸಾಧಿಸಿರುವ ದೇಶಗಳ ಸಾಲಿನಲ್ಲಿ ತಾನೂ ಹೆಜ್ಜೆ ಹಾಕಲು ಹೆಣಗುತ್ತಿದೆ.

ಆದರೆ ಈ ಎಲ್ಲದರಿಂದ ಭಾರತವು ಬಾಹ್ಯವಾಗಿ ಸ್ವತಂತ್ರ ಎನ್ನಲು ಬರುತ್ತದೆಯೆ? ನಮ್ಮ ಮೇಲೆ ವಿದೇಶೀಯರ ಹಿಡಿತ ತಪ್ಪಿದೆಯೆ?

ಮುಂದುವರಿದ ದೇಶಗಳ ಸುಲಿಗೆ ಅರ್ಥವಾಗಿರುವ ಬಡ ದೇಶಗಳು, ಭಾರತದ ಮಾತಿಗೆ ಶ್ರೀಮಂತ ದೇಶಗಳೂ ಕಿವಿಕೊಡುವುದು ಕಂಡು ಅದನ್ನು ತಮ್ಮ ನಾಯಕರಲ್ಲೊಬ್ಬನಾಗಿ ಕಾಣುವುದು ಅನಿವಾರ್ಯ. ಮುಂದುವರಿದ ದೇಶಗಳಿಗಾದರೂ ಎರಡು ವಿಧದ ಪ್ರಯೋಜನದ ಆಶೆ. ಒಂದು–ಭಾರತಕ್ಕೆ ತನ್ನ ಅಪಾರ ಸಂಪನ್ಮೂಲವನ್ನು ಸ್ವತಂತ್ರವಾಗಿ ರೂಢಿಸಿಕೊಳ್ಳುವಷ್ಟು ಚೈತನ್ಯವಿಲ್ಲ. ಒಂದಷ್ಟು ಸಾಲ ಕೊಟ್ಟು, ಒಂದಷ್ಟು ಹೊಗಳಿ, ಒಂದಷ್ಟು ಒತ್ತಡ ಹೇರಿ ಈ ಸಂಪನ್ಮೂಲಗಳನ್ನು ಲಪಟಾಯಿಸುವುದು ಒಂದು ದೃಷ್ಟಿ. ಎರಡನೆಯದು–ಇದೇ ರೀತಿ ಬಹಳ ನೈಸರ್ಗಿಕ ಸಂಪತ್ತು ಹೊಂದಿದ್ದರೂ ರೂಢಿಸಿಕೊಳ್ಳುವ ಚೈತನ್ಯವಿಲ್ಲದ ಇತರ ಬಡ ದೇಶಗಳು ಭಾರತವನ್ನು ನಾಯಕನನ್ನಾಗಿ ಮಾಡಿಕೊಂಡಿರುವುದರಿಂದ, ನಾಯಕನನ್ನು ಮುಷ್ಟಿಯಲ್ಲಿಟ್ಟುಕೊಂಡು ಬಡ ದೇಶಗಳ ಮೇಲೆ ಪ್ರಭಾವ ಬೀರುವ ದೃಷ್ಟಿ.

ವಿದೇಶಿ ಸಾಲಗಳು

ಇವತ್ತು ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಹೆಚ್ಚಿನಂಶ ಹೊರದೇಶಗಳ ಸಾಲವನ್ನು ಅವಲಂಬಿಸಿದೆಯೆನ್ನಬಹುದು. ಯಾವುದೇ ಒಂದು ಯೋಜನೆ ಅಥವಾ ಕಾರ್ಯಕ್ರಮವನ್ನು ಸರ್ಕಾರ ಕೈಗೆತ್ತಿಕೊಳ್ಳಬೇಕಾದರೂ, ದೇಶದಲ್ಲಿ ಅದಕ್ಕಿರುವ ಸಂಪನ್ಮೂಲಗಳನ್ನು ಲೆಕ್ಕ ಹಾಕಿ ಕ್ರೋಢೀಕರಿಸುವ ಮೊದಲು ಅದಕ್ಕೆ ಹೊರದೇಶಗಳಿಂದ ಅಥವಾ ವಿಶ್ವಸಂಸ್ಥೆ–ವಿಶ್ವ ಬ್ಯಾಂಕ್‌ಗಳಿಂದ ನೆರವು, ಸಾಲ ಎಷ್ಟು ಸಿಗುತ್ತವೆ ಎಂಬುದನ್ನು ಲೆಕ್ಕ ಹಾಕ ತೊಡಗುತ್ತದೆ. ಕಳೆದ ವರ್ಷವಷ್ಟೇ, ದೇಶಾದ್ಯಂತ ಪ್ರಗತಿಪರರ ಮತ್ತು ದೇಶಾಭಿಮಾನಿಗಳ ವ್ಯಾಪಕ ಪ್ರತಿಭಟನೆಯ ನಡುವೆ ಬರೀ ವಿಶ್ವಬ್ಯಾಂಕ್ ಒಂದರಿಂದಲೇ **೫ ಸಾವಿರ ಕೋಟಿ** ರೂ. ಗಳಷ್ಟು ಬೃಹತ್ತಾದ ಸಾಲವನ್ನು ಭಾರತ ಸರ್ಕಾರ ಪಡೆಯಿತು. ಇಂದು ನಾವು ವಿದೇಶಿ ಸಾಲಗಳಿಗೆಲ್ಲದರ ಬಾಬ್ತು ತೆರುತ್ತಿರುವ ಬಡ್ಡಿಯೇ ವರ್ಷಕ್ಕೆ **ಒಂದು ಸಾವಿರ ಕೋಟಿ** ರೂ. ಗಳ ಹತ್ತಿರ ತಲುಪಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಹೊರದೇಶಗಳ ಹಣವನ್ನು ನಂಬಿರುವ ನಮ್ಮ ಆರ್ಥಿಕ ಪರಿಸ್ಥಿತಿ ಎದುರಿಸುವ ಅಪಾಯ ಸ್ಪಷ್ಟವೆ?

ವಿಖ್ಯಾತ ಹಣಕಾಸು ಸ್ಥಿತಿ ವೀಕ್ಷಕರಾದ ಬಾಲರಾಜ್ ಮೆಹ್ತಾ, ರಣಜಿತ್ ಸಾಹ್ನಿ, ನಮ್ಮ ಕನ್ನಡದ ಎಚ್ಚೆಸ್ಕೆ ಮುಂತಾದ ಹಲವಾರು ಜನ, ಈ ವಿದೇಶಿ ಸಾಲಗಳಿಂದಾಗಿ ಹಾಗೂ ನಮ್ಮಲ್ಲಿ ಬಂಡವಾಳ ಹೂಡುವ ಅಥವಾ ಕೈಗಾರಿಕೆ ಸ್ಥಾಪಿಸುವ ಬಹುರಾಷ್ಟ್ರೀಯ ಬಂಡವಾಳ ಕಂಪನಿಗಳಿಂದಾಗಿ ದೇಶ ಹೇಗೆ ಒತ್ತಡಕ್ಕೆ ಒಳಗಾಗುತ್ತಿದೆ ಎಂಬುದನ್ನು ಹಲವಾರು ದೃಷ್ಟಾಂತಗಳ ಮೂಲಕ ಪದೇ ಪದೇ ಎತ್ತಿ ತೋರಿಸುತ್ತಿರುತ್ತಾರೆ. ನಮ್ಮ ಹಣಕಾಸು ವ್ಯವಸ್ಥೆಯಲ್ಲಿ ವಿದೇಶಿ ಹಣದ ಪ್ರಭಾವ ಎಷ್ಟಿದೆಯೆಂದರೆ ನಮ್ಮ ನಿತ್ಯ ಜೀವನದ ಪ್ರತಿಯೊಂದು ವಸ್ತುವೂ— ಹಲ್ಲುಪುಡಿ, ಪೇಸ್ಟ್, ಬ್ರಷ್ ನಿಂದ ಹಿಡಿದು ಸಾಬೂನು, ಪಾತ್ರೆ, ಬಟ್ಟೆ, ಸೈಕಲ್ ಮುಂತಾಗಿ ಪ್ರತಿಯೊಂದೂ— ಉತ್ಪಾದನೆಯಾಗುವುದು ವಿದೇಶಿ ಸಹಯೋಗ, ತಂತ್ರಜ್ಞಾನ ಹಾಗೂ ಬಂಡವಾಳದ ನೆರಳಿನಲ್ಲಿ.

ಸದಾಕಾಲ ದೇಶಕ್ಕೆ ನೆರೆಯ ರಾಷ್ಟ್ರಗಳ ಆಕ್ರಮಣದ ಭೀತಿ ತೋರಿಸಿ ನಮ್ಮನ್ನು ಆಳುವ ಜನ ಅಪಾರವಾಗಿ ಶಸ್ತ್ರಾಸ್ತ್ರ ಸಂಗ್ರಹ ಮಾಡಿಕೊಳ್ಳುತ್ತಿದ್ದಾರೆ. ಇದಿಷ್ಟೂ ವಿದೇಶಗಳಿಂದಲೇ ಬರಬೇಕು. ಅದೂ ರಷ್ಯದಂಥ ಒಂದೇ ದೇಶ ಇದರಲ್ಲಿ ಸುಮಾರು ಮುಕ್ಕಾಲು ಭಾಗದವರೆಗೂ ಪಾಲು ಹೊಂದಿದೆಯೆಂದು ವರದಿಗಳು ಹೇಳುತ್ತವೆ. ಇನ್ನೊಂದೆಡೆ ಅಮೆರಿಕ ನಮ್ಮ ಮೂಲ ಅಗತ್ಯದ ವಲಯಗಳಲ್ಲಿ ಹೂಡಿರುವ ಬಂಡವಾಳದಿಂದ ನಮ್ಮನ್ನು ಆಡಿಸಲು ನೋಡುತ್ತಿದೆ. ಪ್ರಪಂಚದ ಮೇಲೆ ಏಕಸ್ವಾಮ್ಯದ ಹಿಡಿತ ಸಾಧಿಸಲು ಪರಸ್ಪರ ಕುತ್ತಿಗೆಗೆ ಕೈ ಹಾಕಿ ಸೆಣಸುತ್ತಿರುವ ಈ ಎರಡು ಅಗ್ರ ದೇಶಗಳ ಕೂಟ ನೀತಿಯಲ್ಲಿ ನಮ್ಮಂಥ ದೇಶಗಳನ್ನು ಅವರ ಪಗಡೆಕಾಯಿಗಳಂತೆ ಆಡಿಸುತ್ತಿವೆ. ಜೊತೆಗೆ ಪೆಟ್ರೋಲಿಯಂ ದೇಶಗಳಂತೂ ನಮ್ಮನ್ನು ಹಲ್ಕಿರಿಯುವಂತೆ ಮಾಡುತ್ತಿವೆ. (ಇದಕ್ಕೆ ನಮ್ಮ ದೇಶದ ಶ್ರೀಮಂತರ ಮತ್ತು ದೈತ್ಯ ಸರ್ಕಾರಿ ಯಂತ್ರದ ಮಿತಿ ಮೀರಿದ ಪೆಟ್ರೋಲ್ ಬಳಕೆಯೇ ಕಾರಣ.)

ಹೀಗೆ ಸಾವಿರಾರು ಕೋಟಿ ರೂ. ಗಳ ವಿದೇಶಿ ಹಣಕಾಸಿಲ್ಲದೆ ದೇಶ ನಡೆಯಲಾರದಾಗಿರುವಾಗ, ಆ ಹಣದ ಕೇ. ೫೦–೬೦

(ಮುಂದಿನ ಪುಟಕ್ಕೆ)

ಕೊಪ್ಪ ಕಿರಿಯ ಕಾಲೇಜು ಪ್ರಿನ್ಸಿಪಾಲರಾಗಿ ನಿವೃತ್ತರಾದ

ಕೆ. ಎಸ್. ನಾರಾಯಣ ಸ್ವಾಮಿ

ಕಿರು ಪರಿಚಯ

೧೯೭೩ ರಿಂದ ಕೊಪ್ಪದ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿದ್ದು ಮೊನ್ನೆ ಜುಲೈ ೩೧ ರಂದು ನಿವೃತ್ತಿ ಹೊಂದಿದ ಶ್ರೀಯುತ ಕೆ. ಎಸ್. ನಾರಾಯಣ ಸ್ವಾಮಿ ಶಿಸ್ತು ಮತ್ತು ಸಮಯ ಪ್ರಜ್ಞೆಗೆ ಮೊದಲ ಆದ್ಯತೆ ಕೊಡುತ್ತಿದ್ದವರು. ವಿದ್ಯಾರ್ಥಿಗಳ ಕರ್ತವ್ಯದ ವಿಷಯದಲ್ಲಿ ನಿಷ್ಠುರರಾಗಿದ್ದ ಅವರು, ವಿದ್ಯಾರ್ಥಿಗಳ ಬಗ್ಗೆ "ಅಮೃತವನೀಯುವ ಬಳ್ಳಿ ವಿಷವೃಕ್ಷವಾಗಬಾರದು" ಎಂಬ ಉದಾತ್ತ ಭಾವನೆ ಹೊಂದಿದ್ದವರು. ವಿದ್ಯಾರ್ಥಿಗಳು ದಾರಿ ತಪ್ಪಿದಾಗ ಅವರನ್ನು ಕರೆದು ಕಟುವಾಗಿ ಬುದ್ಧಿವಾದ ಹೇಳುತ್ತಿದ್ದರೂ ಅವರ ಮನಸ್ಸು ವಿದ್ಯಾರ್ಥಿಗಳ ಬಗ್ಗೆ ಬಹಳ ಮೃದು. ಕಾಲೇಜಿನ ಪ್ರತಿಯೊಂದು ನಡವಳಿಕೆಯಲ್ಲೂ ಕಾನೂನು–ನಿಯಮಗಳಿಗೆ ಪ್ರಾಧಾನ್ಯ ಕೊಡುತ್ತಿದ್ದವರು.

ಬೆಂಗಳೂರು ಜಿಲ್ಲೆಯ ಕನಕಪುರದಲ್ಲಿ ೧೯೨೮ ರಲ್ಲಿ ಹುಟ್ಟಿದ ಶ್ರೀನಾರಾಯಣಸ್ವಾಮಿ ೧೯೫೦ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ರಾಜ್ಯ ಶಾಸ್ತ್ರದಲ್ಲಿ ಎಂ. ಎ. ಮುಗಿಸಿ ಉಪಾಧ್ಯಾಯವೃತ್ತಿಗೆ ಸೇರಿ ಶಿಕ್ಷಣ ರಂಗದ ಹಲವು ಸ್ತರಗಳಲ್ಲಿ ಕೆಲಸ ಮಾಡಿದ್ದಾರೆ.

ಇವರ ಹಿರಿಯ ಮಗ ಡಾ|| ವೆಂಕಟಕೃಷ್ಣ ಇಂಗ್ಲೆಂಡಿನಲ್ಲಿ ವೈದ್ಯರಾಗಿದ್ದುಕೊಂಡು ಹೆಚ್ಚಿನ ವ್ಯಾಸಂಗವನ್ನೂ ಮಾಡುತ್ತಿದ್ದಾರೆ. ಇನ್ನೊಬ್ಬ ಮಗ ಶಿವಮೊಗ್ಗದಲ್ಲಿ ಬಿ. ಇ. ಓದುತ್ತಿದ್ದಾನೆ.

ನಿಷ್ಠುರರಾದರೂ ತಮ್ಮ ಮೃದು ಸ್ವಭಾವದಿಂದಾಗಿ ಶ್ರೀ ನಾರಾಯಣಸ್ವಾಮಿ ವಿದ್ಯಾರ್ಥಿಗಳ ಹಾಗೂ ಸಹೋದ್ಯೋಗಿಗಳ ಮನಸ್ಸಿನಲ್ಲಿ ಬಹಳಕಾಲ ನೆಲೆ ನಿಲ್ಲುತ್ತಾರೆ.

ಬಾಲಚಂದ್ರ ನಾಯಕ,
ಕಿರಿಯ ಕಾಲೇಜು ಉಪನ್ಯಾಸಕರು.

ಓದುಗರ ಪತ್ರ

ಸಂಚಾರಿ ಅಂಚೆ ಕಚೇರಿ ಸ್ಥಳಾಂತರಕ್ಕೆ ವಿರೋಧ

ಮಾನ್ಯರೆ,

ನಮ್ಮ ಬಿಲಗದ್ದೆ ಶಾಲಾ ಕಟ್ಟಡದಲ್ಲಿ ಈ ಹಿಂದೆ ಸುಮಾರು ಒಂದು ವರ್ಷಕ್ಕೂ ಹೆಚ್ಚು ದಿನ ಒಂದು ಸಂಚಾರಿ ಅಂಚೆ ಕಛೇರಿ ನಡೆಯುತ್ತಿದ್ದು, ಈಗ ಕೆಲ ತಿಂಗಳುಗಳಿಂದ ಅದು ಕೆಸಗೋಡು ಎಂಬಲ್ಲಿ ನಡೆಯುತ್ತಿರುವುದು ಕಂಡುಬಂದಿದೆ. ಇದು ಮೇಲುಬೆಳ್ರಿ ಶಾಖಾ ಕಚೇರಿಯಿಂದ ೧ ಕಿ. ಮೀ.ಗಿಂತ ಕಡಿಮೆ ದೂರದಲ್ಲಿದೆ. ೨ ಕಿ. ಮೀ. ದೂರವಿರಬೇಕೆಂತ ಅದರ ನಿಯಮವಂತೆ. ಶಾನುವಳ್ಳಿ ಸಂ. ಅಂ. ಕ. ಸಹ ೧ ಕಿ. ಮೀ. ಮಾತ್ರ ದೂರದಲ್ಲಿದೆ. ನಮಗೆ ಅದು ಪುನಃ ಬೇಕೆಂತ ಮಾನ್ಯ ಶಾಸಕರಿಗೆ, ಜಿಲ್ಲಾ ಇಲಾಖಾ ಮುಖ್ಯಸ್ಥರಿಗೆ —ಯಾರಿಗೆ ಬರೆದರೂ ಪ್ರಯೋಜನವಾಗಿಲ್ಲ. ನಾವು ಇನ್ನ್ನು ಶ್ರೀ ಗಾಂಧೀಜಿಯವರ ಭಾವ ಚಿತ್ರದೆದುರು ಕೂಗಿ ನೋಡಬೇಕಾಗಿದೆ.

—ಕೆ. ಲಕ್ಷ್ಮೀನಾರಾಯಣಪ್ಪ, ಕಾವಳಿ.

ವನಮಹೋತ್ಸವ ಸಮಾರಂಭಗಳು

ಬೇಗಾರು

ಹಿರಿಯ ರೈತ ಕೆ. ಆರ್. ವಿಠಲ ಕಾಮತ್ ಅಧ್ಯಕ್ಷತೆಯಲ್ಲಿ ಆ. ೪ ರಂದು ಇಲ್ಲಿ ವನಮಹೋತ್ಸವ ನಡೆಯಿತು. ಮುಖ್ಯ ಅತಿಥಿಗಳಾಗಿದ್ದ ಶೃಂಗೇರಿ ವಲಯ ಅರಣ್ಯಾಧಿಕಾರಿ ಸೂರ್ಯಾಚಾರ್ ಅವರು ಗೇರು, ಹಲಸು, ಸುಬಾಬುಲ್ ಮುಂತಾದ ೩,೦೦೦ ಸಸಿಗಳನ್ನು ಹಂಚಿ, ಅವುಗಳ ಸಾಕಣೆ ಮತ್ತು ಉಪಯೋಗ ವಿವರಿಸಿದರು. ಜನರ ಆಸಕ್ತಿ ನೋಡಿ-ಬೇಗಾರು ಪಂಚಾಯ್ತಿಗೆ ಇನ್ನೂ ೬ ಸಾವಿರ ಸಸಿ ನೀಡುವ ವಾಗ್ದಾನ ಮಾಡಿದರು. ವಿ. ಆರ್. ಪ್ರಭಾಕರ್ ಸ್ವಾಗತಿಸಿ, ಪಂ. ಅಧ್ಯಕ್ಷ ಕೆ. ಟಿ. ಸಂಜೀವಗೌಡ ವಂದಿಸಿದರು. (ವರದಿ: ಶೃಂಗೇಶ್ವರ)

ಹಿರೇಕೊಡಿಗೆ

ಇಲ್ಲಿನ ಲಾಲ್ ಬಹಾದುರ್ ಶಾಸ್ತ್ರಿ ಪ್ರೌಢಶಾಲೆಯ ಆವರಣದಲ್ಲಿ ಶಾಲಾ ವನ ನಿರ್ಮಾಣ ಮತ್ತು ವಿದ್ಯಾರ್ಥಿ ಸಂಘದ ಉದ್ಘಾಟನೆಗಳು ಆ. ೯ ರಂದು ನಡೆದವು. ಶಾಸಕ ಗೋವಿಂದಗೌಡರು ಸಸಿ ನೆಟ್ಟು ಶಾಲಾ ವನ ನಿರ್ಮಾಣ ಉದ್ಘಾಟಿಸಿದರು. ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ. ಸುಂದರ ನಾಯ್ಕ್ ಅಧ್ಯಕ್ಷತೆ ವಹಿಸಿದ್ದರು.

ಸ್ವಾಗತ, ಅತಿಥಿಗಳ ಪರಿಚಯ ಮಾಡಿದ ಮುಖ್ಯೋಪಾಧ್ಯಾಯ ಐ. ಎಂ. ದುಗ್ಗಪ್ಪಗೌಡ **ಈ ಪ್ರದೇಶದಲ್ಲಿ ಹಿಂದುಳಿದ ವರ್ಗದವರ ಹಾಸ್ಟೆಲ್ ಒಂದರ ಅಗತ್ಯವನ್ನು** ಶಾಸಕರಿಗೆ ವಿವರಿಸಿದರು. ಪಂಚಾಯ್ತಿ ಅಧ್ಯಕ್ಷ ಎ. ಟಿ. ಲಿಂಗಪ್ಪ ನಾಯ್ಕರು ವಿದ್ಯಾರ್ಥಿ ಸಂಘ ಉದ್ಘಾಟಿಸಿದರು. ಸಹಾಯ ಅರಣ್ಯ ಸಂರಕ್ಷಣಾಧಿಕಾರಿ ಎಂ. ಎಸ್. ಬುರಾನ್, ಎ. ಪಿ. ವಿವೇಕಾನಂದ ಮಾತನಾಡಿದರು. ದಿ|| ಎ. ಆರ್. ಚಂದ್ರಮೌಳಿ ನೆನಪಿನಪಾರಿತೋಷಕವನ್ನು ಎಸ್ಸೆಸ್ಸೆಲ್ಸಿಯಲ್ಲಿ ಶಾಲೆಗೆ ಮೊದಲ ಸ್ಥಾನ ಪಡೆದ ಜಿ. ಎಸ್. ಬಾಲಕೃಷ್ಣನ ಪರವಾಗಿ ಆತನ ತಂದೆ ಸ್ವೀಕರಿಸಿದರು. ಬಿ. ಎಸ್. ನಾಗಪ್ಪಗೌಡ ವಂದಿಸಿದರು.

ಕಮ್ಮರಡಿ

ಇಲ್ಲಿನ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಆ. ೯ ರಂದು ಶಾಸಕ ಗೋವಿಂದ ಗೌಡರು ವನಮಹೋತ್ಸವ ಉದ್ಘಾಟಿಸಿದರು. ನಂತರ ಕೆ. ಸುಂದರ್‌ನಾಯ್ಕ್‌ರವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಕುಸುರಗಿ ಕೃಷ್ಣಪ್ಪ ಸ್ವಾಗತಿಸಿದರು. ಶಾಸಕರ ಮುಂದಿಡಲಾದ ಕೆಲವು ಬೇಡಿಕೆಗಳ ಪೈಕಿ ಅತೀ ಅಗತ್ಯವಾದ ಯಾವುದಾದರೂ ನಾಲ್ಕನ್ನು ಈಡೇರಿಸುವುದಾಗಿ ತಿಳಿಸಿದರು. ಪ್ರಾಂಶುಪಾಲ ಮಂಜುನಾಥ್ ವಂದಿಸಿದರು.

(ವರದಿ: ಹು. ಲ. ರಮಾನಂದ.)

ವಯಸ್ಕರ ಶಿಕ್ಷಣಕ್ಕಾಗಿ ಧನ ಸಹಾಯಕ್ಕೆ ಅರ್ಜಿ ಆಹ್ವಾನ

ಚಿಕ್ಕಮಗಳೂರು: ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರತರಾಗಿರುವ ಹಾಗೂ ಸಾಕಷ್ಟು ಸಾಮರ್ಥ್ಯ, ಅನುಭವ ಮತ್ತು ಉತ್ತಮ ಸೇವಾಕಾರ್ಯಕ್ಕೆ ಹೆಸರಾಗಿರುವ ಸ್ವಯಂ ಸೇವಾ ಸಂಸ್ಥೆಗಳಿಂದ ೧೯೮೩-೮೪ನೇ ಸಾಲಿನ ವಯಸ್ಕರ ಶಿಕ್ಷಣಕ್ಕೆ ಧನಸಹಾಯಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಧನ ಸಹಾಯಕ್ಕೆ ಬೇಕಾದ ಅರ್ಹತೆ ಮತ್ತು ಇತರ ವಿವರಗಳನ್ನು ಆಯಾಯ ಜಿಲ್ಲೆಯ ವಯಸ್ಕರ ಶಿಕ್ಷಣಾಧಿಕಾರಿಗಳಿಂದಾಗಲೀ ಅಥವಾ ನಿರ್ದೇಶನಾಲಯದಿಂದಾಗಲಿ ಪಡೆಯಬಹುದು. ನಿಗದಿತ ಅರ್ಜಿಗಳನ್ನು ೩೧-೮-೮೩ರೊಳಗೆ ಸಲ್ಲಿಸಲು ಕೋರಿದೆ.

ಬಾಳೆಹೊನ್ನೂರಿಗೆ ಐಟಿಐ

ಬಾಳೆಹೊನ್ನೂರು: ಇಲ್ಲಿನ ರಂಭಾಪುರಿ ಮಠದ ಜಗದ್ಗುರು ರೇಣುಕಾಚಾರ್ಯ ಟ್ರಸ್ಟ್ ಆಶ್ರಯದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆ ಆರಂಭಿಸಲು ಅನುಮತಿ ದೊರೆತಿದೆ.

ಕಾಲೇಜು ಯಾವಾಗ ಆರಂಭವಾಗುವುದೆಂಬ ಬಗ್ಗೆ ಪ್ರಕಟಣೆ ಇಷ್ಟರಲ್ಲೇ ಹೊರಬೀಳುವ ನಿರೀಕ್ಷೆಯಿದೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ:
ಸಿ. ಮನೆ ಸಾಗರರಾಜ್.
ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ

ಯಾರಿಗೆ ಬಂತು, ಎಲ್ಲಿಗೆ ಬಂತು— ನಲವತ್ತೇಳರ ಸ್ವಾತಂತ್ರ್ಯ?

(೩ನೇ ಪುಟದಿಂದ)

ಭಾಗದಷ್ಟು ದೊಡ್ಡ ಮೊತ್ತವನ್ನು ಒಂದೊಂದು ದೇಶಗಳೇ ಪೂರೈಸುತ್ತಿರುವಾಗ ಅವುಗಳ ಇಷ್ಟಕ್ಕೆ ವಿರುದ್ಧವಾಗಿ ಈ 'ಆಶ್ರಿತ' ದೇಶ ಏನಾದರೂ ಹೆಜ್ಜೆ ಇಡಲು ಸಾಧ್ಯವೆ?

ಹೊರದೇಶಗಳಲ್ಲಿ ತೀವ್ರ ಅಪಾಯಕರವೆಂದು ನಿಷೇಧಿಸಲ್ಪಟ್ಟಿದ್ದರೂ ನಮ್ಮಂಥ ಬಡದೇಶಗಳಲ್ಲಿ 'ಜೀವರಕ್ಷಕ' ಗಳೆಂದು ಅಪಾರ ಬೆಲೆಗೆ ಮಾರಾಟವಾಗುತ್ತಿರುವ ನೂರಾರು ಔಷಧಿಗಳನ್ನು ನಿಷೇಧಿಸಲು ನಮ್ಮ ಸರ್ಕಾರಕ್ಕೆ ಸಾಧ್ಯವಾಗದಿರುವುದು, ಗರ್ವಪೂರ್ವವಾಗಿ ವಿದೇಶಿ ಸೈನ್ಯದ ಮೂಲಕವೇ ದೇಶವನ್ನು 'ಆಳುತ್ತಿರುವ' ಕಂಪೂಚಿಯ ಮತ್ತು ಅಫ್ಘನಿಸ್ತಾನದ 'ಸರ್ಕಾರ'ಗಳಿಗೆ ಇಡೀ ಪ್ರಪಂಚದ ಅಭಿಪ್ರಾಯ ಕಡೆಗಣಿಸಿ, ಮನ್ನಣೆ ಕೊಟ್ಟಿರುವುದು—ಮುಂತಾದುವೆಲ್ಲ ನಮ್ಮ ಪರಾವಲಂಬನೆಯ ಉದಾಹರಣೆಗಳಲ್ಲವೆ?

ದೇಶದ ಪ್ರಗತಿ: ಲಾಭ ಯಾರಿಗೆ?

ಇಂಥ ಪರಿಸ್ಥಿತಿಯಲ್ಲಿ, ನಮ್ಮ ದೇಶದಲ್ಲಿ ಅಪಾರ ಖರ್ಚಿನಲ್ಲಿ ನಡೆಯುತ್ತಿರುವ ನೂರಾರು ಸಂಶೋಧನೆಗಳು ಈ ವಿದೇಶಗಳ ಉಪಯೋಗಕ್ಕಾಗಿಯೇ ಎಂಬುದಾಗಿ ನಮ್ಮ ಹತಾಶ ವಿಜ್ಞಾನಿಗಳು ಈಚೆಗೆ ಹೇಳತೊಡಗಿರುವುದು ವಿಚಾರ ಮಾಡುವಂಥದು. ಅಷ್ಟಾಗಿಯೂ ಈ ಎಲ್ಲ ವೈಜ್ಞಾನಿಕ ಪ್ರಗತಿಯಿಂದ ದೇಶಕ್ಕೆ ಆಗುತ್ತಿರುವ ಲಾಭವೆಲ್ಲ—ಪುನಃ— ಯಾರಿಗೆ ಸಿಗುತ್ತಿದೆ? ದೇಶದ ಬಹುಸಂಖ್ಯೆಯ ಜನರ ಜೀವನ ಮಟ್ಟ ವರ್ಷದಿಂದ ವರ್ಷಕ್ಕೆ ಕೆಳಕೆಳಗೆ ಹೋಗುತ್ತ, ದೇಶದ ಕೆಲವೇ ಕೆಲವು ಅತಿ ದೊಡ್ಡ ಶ್ರೀಮಂತ ಮನೆತನಗಳ (ಬಿರ್ಲಾ, ಟಾಟಾ, ದಾಲ್ಮಿಯ, ಸಿಂಘಾನಿಯ, ಮಫತ್‌ಲಾಲ್, ಇತ್ಯಾದಿಗಳ) ಆಸ್ತಿ-ಪಾಸ್ತಿ ಕೋಟಿಗಟ್ಟಲೆ ಏರುತ್ತಿರುವುದು ನೋಡಿದರೆ ಇದು ಅರ್ಥವಾಗುತ್ತದೆ.

ಎಲ್ಲಿದೆ ಸ್ವಾತಂತ್ರ್ಯ?

ಒಂದು ಕಡೆ ಹೀಗೆ ದೇಶದ ಇಡೀ 'ಸ್ವಾತಂತ್ರ್ಯ'ವನ್ನು ತಮ್ಮ ಮುಷ್ಟಿಯಲ್ಲಿಟ್ಟುಕೊಂಡು ವಿದೇಶಿಯರಿಗೆ ಅಡಿಯಾಳಾಗಿ ದೇಶವನ್ನು ನೂಕಿಕೊಂಡು ಹೋಗುತ್ತಿರುವ ಈ ಜನವರ್ಗವಾದರೆ, ಇನ್ನೊಂದೆಡೆ ದಿನದಲ್ಲಿ ಒಪ್ಪತ್ತಿನ ಊಟ ಸಹ ಖಾತ್ರಿಯಿಲ್ಲದ ಶೇ. ೫೦ ಜನಸಂಖ್ಯೆ. ಅದರಲ್ಲೂ, ನಾವು 'ಪವಿತ್ರ' ವೆಂದು ಹುಂಬರಂತೆ ಬೀಗುವ ಈ ದೇಶದಲ್ಲಿ ಕಾಲಂಶ ಜನರನ್ನು ಉಳಿದವರು ನಾಯಿಗಿಂತ, ಸಗಣಿಗಿಂತ ಕೀಳಾಗಿ ಕಾಣುವ (ಅವು ನಮಗೆ ತಾಗಿದರೆ ಸ್ನಾನ ಮಾಡಬೇಕೆಂದು ನಮ್ಮ ಶಾಸ್ತ್ರಗಳು ಹೇಳುವುದಿಲ್ಲ, ಆದರೆ ಈ ಕಾಲಂಶ ಜನರ ನೆರಳು ಬಿದ್ದರೂ ಸ್ನಾನ ಅಗತ್ಯ!); ಅವರನ್ನು ಜೀವಸಹಿತ ಸುಡುವ, ಕಡಿದು—ಬಡಿದು ಕೊಲ್ಲುವ ಶಾಸ್ತ್ರಬದ್ಧವಾದ ನಡವಳಿಕೆ.

ಹೀಗೆಲ್ಲ ಇದ್ದರೆ ಇದಕ್ಕೆ ಸ್ವಾತಂತ್ರ್ಯ ಎನ್ನಬೇಕೆ? ಅದಕ್ಕೇ ನಮ್ಮ ಎಚ್ಚೆತ್ತ ಯುವ ಜನ, ಯೋಚಿಸುವ ದಲಿತ ಜನ ಈ ಆಗಸ್ಟ್ ೧೫ರ ದಿನ ಕೂಗತೊಡಗಿರುವುದು—

"ಹೊಟ್ಟೆಗೆ ಹಿಟ್ಟಿಲ್ಲ,
ಜುಟ್ಟಿಗೆ ಸ್ವಾತಂತ್ರ್ಯ,
ದುಡಿಮೆಯ ಹಕ್ಕಿಲ್ಲ,
ಬೊಗಳೆ ಸ್ವಾತಂತ್ರ್ಯ!"
"ಯಾರಿಗೆ ಬಂತು, ಎಲ್ಲಿಗೆ ಬಂತು—
ನಲವತ್ತೇಳರ ಸ್ವಾತಂತ್ರ್ಯ?"

ವಿದ್ಯಾಗಣಪತಿ ಸೇವಾ ಸಮಿತಿ

ಕುದುರೆಗುಂಡಿ: ಇಲ್ಲಿನ ಶ್ರೀ ವಿದ್ಯಾ ಗಣಪತಿ ಸೇವಾಸಮಿತಿಗೆ ೧೯೮೩ ನೇ ವರ್ಷಕ್ಕೆ ಕೆ. ವಿಜಯ ಅಜಿಲ (ಅಧ್ಯಕ್ಷ), ಬಿ. ಜಿ. ಹಿರಿಯಣ್ಣ (ಕಾರ್ಯದರ್ಶಿ), ಎ. ಎಲ್. ಮೋಹನರಾವ್ (ಸಹಕಾರ್ಯದರ್ಶಿ), ಬಿ. ಕೃಷ್ಣಪ್ಪ (ಖಜಾಂಚಿ), ಮತ್ತು ಅಲಂಕಾರ ಸಮಿತಿಗೆ ಅಧ್ಯಕ್ಷರಾಗಿ ಹೆಚ್. ಎಸ್. ಲಿಂಗಪ್ಪಗೌಡ ಇವರುಗಳು ಆಯ್ಕೆಯಾಗಿದ್ದಾರೆ.

ಉತ್ತಮೇಶ್ವರ ಮೈಸೂರು ಬ್ಯಾಂಕ್: ಸ್ಥಳೀಯರ ನೇಮಕಕ್ಕೆ ಒತ್ತಾಯ

ಉತ್ತಮೇಶ್ವರ: ರೈತ ವರ್ಗಕ್ಕೆ ಅನುಕೂಲವಾಗುವಂತೆ ಬೆಳವಿನಕೊಡಿಗೆ ಪಂಚಾಯ್ತಿ ವ್ಯಾಪ್ತಿಯ ಉತ್ತಮೇಶ್ವರದಲ್ಲಿ ಮೈಸೂರು ಬ್ಯಾಂಕಿನ ಶಾಖೆ ತೆರೆದಿದ್ದಕ್ಕೆ ಬ್ಯಾಂಕಿನ ರೀಜಿನಲ್ ಮ್ಯಾನೇಜರ್ ರವರನ್ನು ವಂದಿಸಿರುವ ಬೆಳವಿನಕೊಡಿಗೆ ಪಂ. ಮಟ್ಟದ ಭಾಜಪ ಸಮಿತಿಯ ಅಧ್ಯಕ್ಷ ಕೆ. ಚಂದ್ರಶೇಖರ ಜೋಶಿ, ಬ್ಯಾಂಕಿಗೆ ನೌಕರರನ್ನು ನೇಮಿಸಿಕೊಳ್ಳುವಾಗ ಆದಷ್ಟೂ ಪಂಚಾಯ್ತಿವ್ಯಾಪ್ತಿಯ ಸ್ಥಳೀಯರನ್ನೇ ನೇಮಿಸಬೇಕೆಂದು ಒತ್ತಾಯಿಸಿದ್ದಾರೆ.

ಶಾಖೆ ತೆರೆಯುವ ಮೊದಲ ಹಂತದಲ್ಲೇ ಎದುರಾದ ಅನೇಕ ತೊಂದರೆಗಳನ್ನು ನಯವಾಗಿಯೂ, ದಿಟ್ಟತನದಿಂದಲೂ ಎದುರಿಸಿದ ಕೊಪ್ಪಶಾಖೆ ಮ್ಯಾನೇಜರರನ್ನು ಜೋಶಿ ಅಭಿನಂದಿಸಿದ್ದಾರೆ.